**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ: ತುಮಕೂರು ಜಿಲ್ಲೆ, ಶಿರಾ ತಾಲ್ಲೂಕು ದೊಡ್ಡಬಾಣಗೆರೆ ಗ್ರಾಮಕ್ಕೆ ಬರಗೂರು ಮಾರ್ಗದಿಂದ ಶ್ರೀ ಕ್ಷೇತ್ರ ರಂಗಧಾಮ ಮಾರ್ಗವಾಗಿ ಬರುವ ಗಂಡಿಹಳ್ಳಿ ಗೇಟ್ ರಸ್ತೆ ಕಾಮಗಾರಿ ಗುಣಮಟ್ಟದ ಕುರಿತು ತನಿಖೆ ನಡೆಸಿ ವರದಿ ನೀಡುವ ಬಗ್ಗೆ.

**ಪ್ರಸ್ತಾವನೆ:**

2013-14ನೇ ಸಾಲಿನಲ್ಲಿ ತುಮಕೂರು ಜಿಲ್ಲೆ, ಶಿರಾ ತಾಲ್ಲೂಕು ದೊಡ್ಡಬಾಣಗೆರೆ ಗ್ರಾಮಕ್ಕೆ ಬರಗೂರು ಮಾರ್ಗದಿಂದ ಶ್ರೀ ಕ್ಷೇತ್ರ ರಂಗಧಾಮ ಮಾರ್ಗವಾಗಿ ಬರುವ ಗಂಡಿಹಳ್ಳಿ ಗೇಟ್ ರಸ್ತೆ ಕಾಮಗಾರಿಯನ್ನು ರೂ.30.00 ಲಕ್ಷದಲ್ಲಿ ಅಭಿವೃದ್ಧಿ ಪಡಿಸಲು ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:228/15 ಆರ್.ಆರ್.ಸಿ.2013 ದಿ: 31-12-2013ರಲ್ಲಿ ಅನುಮೋದನೆ ನೀಡಲಾಗಿದೆ.

ಸದರಿ ಕಾಮಗಾರಿಯ ಅನುಷ್ಠಾನವನ್ನು ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಗಮ ರವರಿಗೆ ವಹಿಸಲಾಗಿದ್ದು, ಶ್ರೀ.ಹರೀಶ್ ಎಂಬ ಗುತ್ತಿಗೆದಾರರಿಗೆ ಕೆಲಸವನ್ನು ವಹಿಸಿ, ಇಲಾಖೆಯ ಯಾವುದೇ ಉಸ್ತುವಾರಿ ಮಾಡದಿರುವ ಕಾರಣ ಶಿರಾ ತಾಲ್ಲೂಕು ದೊಡ್ಡಬಾಣಗೆರೆ ಗ್ರಾಮಕ್ಕೆ ಬರಗೂರು ಮಾರ್ಗದಿಂದ ಶ್ರೀ ಕ್ಷೇತ್ರ ರಂಗಧಾಮ ಮಾರ್ಗವಾಗಿ ಬರುವ ಗಂಡಿಹಳ್ಳಿ ಗೇಟ್ ರಸ್ತೆ ಕಾಮಗಾರಿಯು ತುಂಬಾ ಕೆಳಮಟ್ಟದಲ್ಲಿದೆ ಅನಗತ್ಯವಾಗಿ ದೊಟ್ಟಬಾಣಗೇರಿ ಗ್ರಾಮದ ಶ್ರೀ ರಂಗನಾಥಸ್ವಾಮಿ ದೇವಸ್ಥಾನದ ಮುಂದೆ ಅದರ ರಸ್ತೆಯ ಮಾರ್ಗವನ್ನು ಬದಲಾಯಿಸಿರುವ ಕಾರಣ ಪ್ರತಿನಿತ್ಯ ಬರಗೂರು ರಸ್ತೆಯಲ್ಲಿ ಸಂಚರಿಸುವ ಶಾಲಾ ಬಸ್ಸುಗಳು ಅಪಘಾತಕ್ಕೆ ಒಳಗಾಗಿವೆ ಎಂದು ಹಾಗೂ ಈ ಬಗ್ಗೆ ತುಮಕೂರಿನ ಸ್ಥಳೀಯ ದಿನ ಪತ್ರಿಕೆಯಲ್ಲಿ ಸುದ್ದಿ ಪ್ರಕಟವಾಗಿರುತ್ತದೆ ಎಂದು ಮತ್ತು ಇದಕ್ಕೆ ಸಂಬಂಧಪಟ್ಟಂತೆ ಗುತ್ತಿಗೆದಾರರು ರಸ್ತೆಯನ್ನು ಅಗಿದು ಜಲ್ಲಿ ಹಾಕಿ ಕಾಮಗಾರಿ ಪೂರ್ಣಗೊಳಿಸದೆ ಇರುವ ಕುರಿತು ಡಾ:ಕೆ.ಆರ್.ಕಮಲೇಶ. ಕಾರ್ಯನಿರ್ವಾಹಕ ಅಧಿಕಾರಿ, ಕರ್ನಾಟಕ ಚಿತ್ರಕಲಾ ಪರಿಷತ್ ರವರು ದೂರು ನೀಡಿರುತ್ತಾರೆ. ( ಪ್ರತಿ ಲಗತ್ತಿಸಿದೆ)

ಈ ಹಿನ್ನಲೆಯಲ್ಲಿ ಸದರಿ ದೂರಿಗೆ ಸಂಬಂಧಿಸಿದಂತೆ ಎಲ್ಲಾ ಅಂಶಗಳ ಬಗ್ಗೆ ಸಮಗ್ರವಾಗಿ ತನಿಖೆ ನಡೆಸಿ ಪೂರ್ಣ ವಿವರಗಳೊಂದಿಗೆ ವರದಿ ಪಡೆಯಲು ರಾಜ್ಯ ಗುಣ ನಿಯಂತ್ರಣ ಮಾನೀಟರ್ (ಎಸ್.ಕ್ಯೂ.ಎಂ) ಒಬ್ಬರನ್ನು ನಿಯೋಜಿಸಲು ಸರ್ಕಾರವು ತೀರ್ಮಾನಿಸಿರುತ್ತದೆ.

**ಆದ್ದರಿಂದ ಈ ಆದೇಶ.**

**<u>ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ:43::ಆರ್ಆರ್‌ಸಿ/2015 ಬೆಂಗಳೂರು, ದಿ: 31-03-2015</u>**

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ತುಮಕೂರು ಜಿಲ್ಲೆ, ಶಿರಾ ತಾಲ್ಲೂಕು ದೊಡ್ಡಬಾಣಗೆರೆ ಗ್ರಾಮಕ್ಕೆ ಬರಗೂರು ಮಾರ್ಗದಿಂದ ಶ್ರೀ ಕ್ಷೇತ್ರ ರಂಗಧಾಮ ಮಾರ್ಗವಾಗಿ ಬರುವ ಗಂಡಿಹಳ್ಳಿ ಗೇಟ್ ರಸ್ತೆ ಕಾಮಗಾರಿ ಗುಣಮಟ್ಟದ ಕುರಿತು ಸಮಗ್ರವಾಗಿ ತನಿಖೆ ನಡೆಸಿ ಕಾಮಗಾರಿಯ ಗುಣಮಟ್ಟದ ಬಗ್ಗೆ ಹಾಗೂ ಕಾಮಗಾರಿಯ ಅನುಷ್ಠಾನದಲ್ಲಿ ಅವ್ಯವಹಾರ ಬಗೆಗಿನ ಕುರಿತು ಪೂರ್ಣ ವಿವರಗಳೊಂದಿಗೆ ಹಾಗೂ ಇದಕ್ಕೆ ಜವಾಬ್ದಾರರಾದ ಅಧಿಕಾರಿ/ ನೌಕರರ ವಿವರಗಳೊಂದಿಗೆ ಸಲ್ಲಿಸುವಂತೆ ಆದೇಶಿಸಿ ರಾಜ್ಯ ಗುಣ ನಿಯಂತ್ರಣ ಮಾನೀಟರ್ (ಎಸ್.ಕ್ಯೂ.ಎಂ)ರವರನ್ನು ನೇಮಿಸಲಾಗಿದೆ.

| |
|---|
| ಶ್ರೀ.ಎಸ್.ನಾಗರಾಜಯ್ಯ ಬಿನ್ ಹೆಚ್. ಶಿವಣ್ಣ, |

ಸದರಿ ತನಿಖಾ ತಂಡದ ಅಧಿಕಾರಿಗಳಿಗೆ KRRDA ದರಗಳಂತೆ ನಿಯಮಾನುಸಾರ ಪ್ರವಾಸ ಭತ್ಯೆಗಳನ್ನು ನೀಡಲಾಗುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಬೂವನಹಳ್ಳಿ ನಾಗರಾಜ್)
ನಿರ್ದೇಶಕರು,
ಸುವರ್ಣ ಗ್ರಾಮೋದಯ ಯೋಜನೆ ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಪ್ರತಿ:-

1. ಮಹಾಲೇಖಪಾಲರು (ಲೆಕ್ಕಪತ್ರ) ಕರ್ನಾಟಕ, ಬೆಂಗಳೂರು.
2. ಮಹಾಲೇಖಪಾಲರು (ಆಡಿಟ್-1) ಕರ್ನಾಟಕ, ಬೆಂಗಳೂರು.
3. ಮಹಾಲೇಖಪಾಲರು (ಆಡಿಟ್-2) ಕರ್ನಾಟಕ, ಬೆಂಗಳೂರು.
4. ~~ಮಾನ್ಯ ಮುಖ್ಯಮಂತ್ರಿಗಳ ಆಪ್ತಕಾರ್ಯದರ್ಶಿಗಳು,~~ ಮುಖ್ಯಮಂತ್ರಿಗಳ ಕಾರ್ಯಾಲಯ, ವಿಧಾನ ಸೌಧ, ಬೆಂಗಳೂರು.
5. ಸರ್ಕಾರದ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ, ಬೆಂಗಳೂರು.
7. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
8. ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, (ಪಿಎಂಯು) (ಐಎಫ್) 5ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು.
9. ಸರ್ಕಾರದ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ. ಬಹುಮಹಡಿ ಕಟ್ಟಡ, ಬೆಂಗಳೂರು.
10. ವಿಶೇಷಾಧಿಕಾರಿಗಳು, (ಜಿ.ಪಂ) ಮತ್ತು ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
11. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
12. ಮುಖ್ಯ ಇಂಜಿನಿಯರ್, ಪಂ.ರಾಜ್ ಇಂಜಿನಿಯರಿಂಗ್ ಇಲಾಖೆ, ಗ್ರಾಮೀಣಾಭಿವೃದ್ಧಿಭವನ,
13. ಆನಂದರಾವ್ ವೃತ್ತ, ಬೆಂಗಳೂರು-560009.
14. ಶ್ರೀ ಎಸ್. ನಾಗರಾಜಯ್ಯ ಬಿನ್ ಹೆಚ್. ಶಿವಣ್ಣ ನಂ:972, 2ನೇ ಮುಖ್ಯ ರಸ್ತೆ, 4ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು.
15. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು. ಜಿಲ್ಲಾ ಪಂಚಾಯತ್, ತುಮಕೂರು
16. ಕಾರ್ಯಪಾಲಕ ಅಭಿಯಂತರರು, ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ತುಮಕೂರು/ ಮಧುಗಿರಿ.
17. ಡಾ॥ ಕೆ.ಆರ್. ಕಮಲೇಶ, ಕಾರ್ಯನಿರ್ವಾಹಕ ಅಧಿಕಾರಿ, ಕರ್ನಾಟಕ ಚಿತ್ರಕಲಾ ಪರಿಷತ್, ಆರ್ಟ್ ಕಾಂಪ್ಲೆಕ್ಸ್, ಕುಮಾರಕೃಪಾ ರಸತೆ, ಬೆಂಗಳೂರು-01.
18. ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.